(ಇಂದು ದಿಃ 12-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- ಶ್ರೀ.VJM** ವಕೀಲರಿಂದ **:-**

ನಾನು ಗಡಿಕೇಶ್ವರ ಗ್ರಾಮದಲ್ಲಿ ವಾಸ ಇರುತ್ತೇನೆ. ನನ್ನ ಮದುವೆ ಆದಾಗಿನಿಂದ ಗಡಿಕೇಶ್ವರ ಗ್ರಾಮದಲ್ಲಿ ವಾಸ ಇರುತ್ತೇನೆ. ಸಾಕ್ಷಿ ಮುಂದುವರೆದು ವರ್ಷಕೊಮ್ಮೆ ತವರಿಗೆ ಬರುತ್ತೇನೆ ಎಂದು ಹೇಳುತ್ತಾರೆ. 1 ರಿಂದ 5 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೆಣ್ಣು ಮಕ್ಕಳ ನಡುವೆ ಹೊಂದಾಣಿಕೆ ಆಗದ ಕಾರಣ ಅಡುಗೆ ಮಾತ್ರ ಬೇರೆ ಮಾಡಿಕೊಳ್ಳುತಿದ್ದರು ಆದರೆ ವಿಭಾಗ ಆಗಿರಲಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 8 ವಿಸ್ತಿರ್ಣ 8 ಎಕರೆ ಇದೆ. ನನ್ನ ತಂದೆ ಹೆಸರು ಶಂಕರಪ್ಪ ತಂದೆ ರಾಚಪ್ಪ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ಸರ್ವೆ ನಂಬರ 8 ಒಟ್ಟು ವಿಸ್ತಿರ್ಣ 8 ಎಕರೆ ಜಮೀನು ಇತ್ತು. ನಾರಾಯಣದಾಸ ತಂದೆ ಪಂಕಟಲಾಲ ಬಜಾಜ ರವರ ಪರಿಚಯ ನನಗೆ ಇಲ್ಲ. ನನ್ನ ತಂದೆ ಸದರಿ ನಾರಾಯಣದಾಸ

ರವರಿಗ ಸರ್ವೆ ನಂ. 8 ರಲ್ಲಿನ ಜಮೀನನ್ನು ಮಾರಾಟ ಮಾಡಿದರು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ಸರ್ವೆ ನಂಬರಃ 8 ರ ಜಮೀನು ನಾರಾಯಣದಾಸ ರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸರ್ವೆ ನಂಬರಃ 8 ರಲ್ಲಿನ ಜಮೀನುಗಳ ಸಂಬಂಧ 1 ನೇಪ್ರತಿವಾದಿ ಮತ್ತು ಬಸಪ್ಪನ ಹೆಸರಿಗೆ ಬೇರೆ ಬೇರೆ ಪಹಣಿ ಬರುತ್ತಿವೆ ಎಂದರೆ ಸರಿಯಲ್ಲ. ಸರ್ವೆ ನಂಬರಃ 8 ರಲ್ಲಿ ಸರ್ಕಾರ ಕೂಡ ಸ್ವಲ್ಪ ಜಮೀನು ವಶಪಡಿಸಿಕೊಂಡಿದೆ ಎಂದರೆ ಸರಿ. ಆಸಂಬಂಧ ಬಂದ ಪರಿಹಾರದ ಹಣವನ್ನು 1 ರಿಂದ 5 ನೇ ಪ್ರತಿವಾದಿಯರು ಹಂಚಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರ ಜಮೀನು ವಶಪಡಿಸಿಕೊಂಡು ಎಷ್ಟು ವರ್ಷ ಆಯಿತು ನನಗೆ ಗೊತ್ತಿಲ್ಲ. ಸರ್ವೆ ನಂಬರಃ 8 ರಲ್ಲಿನ ಜಮಿನನ್ನು 40 ವರ್ಷಗಳ ಹಿಂದೆ ಸೇಡಂ ರೈಲ್ವೇ ಸ್ಟೇಷನ ನಿರ್ಮಾಣ ಮಾಡಲು ವಶಪಡಿಸಿಕೊಂಡಿದ್ದರು ಎಂದರೆ ಸರಿ. ಸರ್ಕಾರ ವಶಪಡಿಸಿಕೊಂಡ ನಂತರ ಸರ್ವೆ ನಂಬರಃ 8 ರಲ್ಲಿ 4 ಹಿಸ್ಸೆಗಳು ಆಗಿವೆ ಎಂದರೆ ಸರಿಯಲ್ಲ. ಸರ್ಕಾರ APMC ಕಟ್ಟಡ ನಿರ್ಮಾಣ ಮಾಡಲು ಕೂಡ ಸರ್ವೆ ನಂಬರಃ 8 ರಲ್ಲಿನ ಜಮೀನನ್ನು ವಶಪಡಿಸಿಕೊಂಡಿದೆ ಎಂದರೆ ಸರಿಯಲ್ಲ.

ಸರ್ವೆ ನಂಬರಃ 8 ರಲ್ಲಿ ಸರ್ಕಾರ ಭೂಸ್ವಾಧಿನ ಪಡಿಸಿಕೊಂಡ ನಂತರ ನಮ್ಮ ಕುಟುಂಬಕ್ಕೆ 3 ಎಕರೆ ಜಮೀನು ಉಳಿದುಕೊಂಡಿದೆ. ಸದರಿ 3 ಎಕರೆ ಜಮೀನು ಈಗ 1 ನೇ ಪ್ರತಿವಾದಿ ಹೆಸರಿನಲ್ಲಿದೆ. ಸದರಿ ಜಮೀನು 1 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಪಹಣಿ ಹಾಜರುಪಡಿಸಿಲ್ಲ. ದಾವಾಯಲ್ಲಿ ಸರ್ವೆ ನಂಬರಃ 8 ರಲ್ಲಿನ 3 ಎಕರೆ ಜಮೀನನ್ನು ಈದಾವೆಯಲ್ಲಿ ಸೇರಿಸಿದ್ದೇನೆ. ಸಾಕ್ಷಿ ಮುಂದುವರೆದು 5 ಎಕರೆ ಭೂಸ್ವಾಧಿನಗೊಂಡಿದೆ ಉಳಿದ 3 ಎಕರೆಯಲ್ಲಿ ಭಾಗ ಕೇಳಿದ್ದೇನೆ ಎಂದು ಹೇಳುತ್ತಾರೆ. ಸರ್ಕಾರದವರು 5 ಎಕರೆ ಜಮಿನನ್ನು ಭೂಸ್ವಾಧಿನಪಡಿಸಿಕೊಂಡಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ಸರ್ವೆ ನಂಬರ 8 ಕ್ಕೆ ಸಂಬಂಧಿಸಿದಂತೆ 1, 3 ಮತ್ತು 5 ನೇ ಪ್ರತಿವಾದಿಗಳು ತಮ್ಮ ಹೆಸರುಗಳಿಗೆ ಬೇರೆ ಬೇರೆ ಹಿಸ್ಸೆ ಮತ್ತು ಬೇರೆ ಬೇರೆ ಪಹಣಿಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರು ವಿಭಾಗ ಮಾಡಿಕೊಂಡಿರುವ ಕಾರಣ ಅವರ ಹೆಸರುಗಳಿಗೆ ಬೇರೆ ಪಹಣಿ ಬರುತ್ತಿವೆ ಎಂದರೆ ನನಗೆ ಗೊತಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಹಣಿಗಳಲ್ಲಿ 1, 3 ಮತ್ತು 5 ನೇ ಪ್ರತಿವಾದಿಯರ ಹೆಸರುಗಳಲ್ಲಿ ಬೇರೆ ಬೇರೆ ಪಹಣಿಗಳು ಇವೆ ಎಂದರೆ ಸರಿಯಲ್ಲ. 1, 3 ಮತ್ತು 5 ನೇಪ್ರತಿವಾದಿಯರು ಸರ್ವೆ ನಂಬರಃ 8 ರಲ್ಲಿನ ಜಮೀನನ್ನು ವಿಭಾಗ ಮಾಡಿಕೊಂಡ ನಂತರ ಸದರಿ ಜಮೀನನ್ನು ಭೂಪರಿವರ್ತನೆ ಮಾಡಿಕೊಂಡು ಲೇಔಟ ಹಾಕಿದ್ದಾರೆ ಎಂದರೆ ಸರಿಯಲ್ಲ. ಆರೀತಿ ಲೇಔಟ ಆದನಂತರ 1,3

ಮತತು 5 ನೇ ಪ್ರತಿವಾದಿಯರು ಪ್ಲಾಟಗಳನ್ನು ಬೇರೆ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ಲಾಟ ಖರೀದಿ ಮಾಡಿದರು ತಮ್ಮ ಹೆಸರಿಗೆ ಮುಟೇಷನ ಮಾಡಿಸಿಕೊಂಡು ಈಗಾಗಲೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸೇಡಂ ರೇಲ್ವೆ ಸ್ಟೇಷನಗೆ ಹೋಗಿದ್ದೇನೆ. ರೈಲ್ವೇ ಸ್ಟೆಷನಗೆ ತಾಗಿಕೊಂಡು ಉತ್ತರ ದಿಕ್ಕಿಗೆ ಪ್ಲಾಟಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಪ್ಲಾಟಗಳನ್ನು ಖರೀದಿ ಮಾಡಿದವರು ಅವರವರ ಪ್ಲಾಟಗಳಲ್ಲಿ ಸ್ವಾಧಿನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಪ್ಲಾಟಗಳು ಆಗಿರುವುದು ನನಗೆ ಇತ್ತಿಚೆಗೆ ಗೊತ್ತಾಗಿದೆ ಅಲ್ಲಿ 60 ಪ್ಲಾಟಗಳು ಆಗಿವೆ. 60 ಪ್ಲಾಟಗಳ ಪೈಕಿ 23 ಪ್ಲಾಟಗಳನ್ನು ಮಾರಾಟ ಮಾಡಿದ್ದಾರೆ. ಉಳಿದ 37 ಪ್ಲಾಟಗಳು ಯಾರ ಯಾರ ಹೆಸರಿನಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. ಪ್ಲಾಟಗಳನ್ನು ಮಾರಾಟ ಮಾಡಿದ ಸಂಗತಿ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ 8 ರಲ್ಲಿನ ಪ್ಲಾಟಗಳನ್ನು ಹೊರತುಪಡಿಸಿ ಸೇಡಂ ಪಟ್ಟಣದಲ್ಲಿ ನಮ್ಮ ಕುಟುಂಬಕ್ಕೆ 2 ಮನೆಗಳಿವೆ. ಅವುಗಳ ಮನೆ ನಂಬರ ನೆನಪಿಲ್ಲ. ಹಲಕರ್ಟಿ ಓಟಿಯಲ್ಲಿ ರೇವಣಸಿದ್ದೇಶ್ವರ ಗುಡಿ ಬಳಿ ಸದರಿ ಮನೆಗಳಿವೆ. ಒಂದು ಮನೆ ಹೋಳಿತಿಪ್ಪಿಯಲ್ಲಿದೆ ಇನ್ನೊಂದು ಮನೆ ರೇವಣಸಿದ್ದೇಶ್ವರ ಗುಡಿ ಬಳಿ ಇದೆ ಎಂದರೆ ಸರಿ. ನನಗೆ ನನ್ನ ತವರು ಮನೆ ಆಸ್ತಿಗಳ ಬಗ್ಗೆ ಮತ್ತು ಮನೆಗಳ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ರೇವಣಸಿದ್ದೇಶ್ವರ ಗುಡಿ ಬಳಿ ಇರುವ ಮನೆಯಲ್ಲಿ 1 ರಿಂದ 5 ನೇ ಪ್ರತಿವಾದಿಯರು ಬೇರೆ ಬೇರೆ ವಾಸ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮನೆಯಲ್ಲಿ ಕೂಡಿ ಇದ್ದಾರೆ ಎಂದು ಹೇಳುತ್ತಾರೆ.1 ರಿಂದ 5 ನೇ ಪ್ರತಿವಾದಿಯರು ಸದರಿ ಮನೆಯಲ್ಲಿ ಒಟ್ಟಿಗೆ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೋಳಿ ತಿಪ್ಪಿ ಮನೆಯಲ್ಲಿ ಯಾರು ವಾಸ ಇಲ್ಲ. 1 ರಿಂದ 5 ನೇ ಪ್ರತಿವಾದಿಯರು ಬೇರೆ ಬೇರೆ ಆಗಿದ್ದಾರೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಅವರವರ ಭಾಗದ ಆಸ್ತಿಗಳನ್ನು ಅವರವರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಆರೀತಿ ತಮ್ಮ ಭಾಗದ ಆಸ್ತಿಗಳಲ್ಲಿನ ಆದಾಯದಿಂದ ಅವರು ಬೇರೆ ಬೇರೆ ಸ್ವತ್ತುಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ಕಾರ ಭೂಸ್ವಾಧಿನ ಪಡೆದುಕೊಂಡ ನಂತರ ಬಂದ ಪರಿಹಾರಣ ಹಣದಿಂದ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಯಾರ ಯಾರ ಹೆಸರಿನಲ್ಲಿ ಯಾವ ಯಾವ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ನನಗೆ ಗೊತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿ ಹೆಸರಿನಲ್ಲಿ ಖರೀದಿ ಮಾಡಿದ

ಜಮಿನೀನ ಸರ್ವೆ ನಂಬರ 691 ಮತ್ತು ವಿಸ್ತಿರ್ಣ 9 ಎಕರೆ ಚಿಲ್ಲರೆ ಇದೆ. ರೇವಣಸಿದ್ದೇಶ್ವರ ಬಳಿ ಇರುವ ಮನೆ ಮತ್ತು ಹೋಳಿತಿಪ್ಪಿಯಲ್ಲಿರುವ ಮನೆಯಲ್ಲಿ 1 ರಿಂದ 5 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದು ವಿಭಾಗದ ಪ್ರಕಾರ TMC ಯಲ್ಲಿ ಮುಟೇಷನ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಹೆಸರಿಗೆ ಆಸ್ತಿ ಖರೀದಿಸಿದ ಬಗ್ಗೆ ದಾಖಲಾತಿ ಹಾಜುರುಪಡಿಸಿಲ್ಲ ಎಂದರೆ ಸರಿ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
**ಸೇಡಂ.**